

ದೇಶ ಎಪ್ಪತ್ತೈದನೇ ಸ್ವಾತಂತ್ರ್ಯೋತ್ಸವದ ಸಂಭ್ರಮದಲ್ಲಿದೆ. ಹೆಣ್ಣುಮಕ್ಕಳ ಸಮಾನತೆಯ ಹಂಬಲಕ್ಕೆ ಮಾತ್ರ ಯಾವುದೇ ಅರ್ಥ ದೊರೆತಂತಿಲ್ಲ. ಒಂದೆಡೆ ಅತ್ಯಾಚಾರ ಪ್ರಕರಣಗಳ ಹೆಚ್ಚಳ, ಇನ್ನೊಂದೆಡೆ ಸಂತ್ರಸ್ತೆಯರ ಆತ್ಮವಿಶ್ವಾಸ ಕುಗ್ಗಿಸುವಂತಹ ಸಮಾಜದ ವರ್ತನೆ. ಸುರಕ್ಷತೆಯ ದೃಷ್ಟಿಯಿಂದ ಹೆಣ್ಣುಮಕ್ಕಳನ್ನು ಮನೆಯಲ್ಲಿಯೇ ಇರಿಸುವ ಮಾತುಗಳನ್ನು ಸರ್ಕಾರದ ಪ್ರತಿನಿಧಿಗಳೇ ಆಡುವಾಗ, ಸ್ವಾತಂತ್ರ್ಯ–ಸಮಾನತೆಯಂತಹ ಆಶಯಗಳಿಗೆ ಅರ್ಥವಾದರೂ ಏನು? ಒಂದಂತೂ ನಿಜ, ಸಮಾಜದ ನೈತಿಕ ತಳಹದಿಯಲ್ಲಿ ದೊಡ್ಡ ಬಿರುಕು ಉಂಟಾಗಿದೆ. ಗಂಡು ಮತ್ತು ಹೆಣ್ಣಿನ ನಡುವಿನ ತರತಮ ಹೆಚ್ಚುತ್ತಲೇ ಇದೆ. ಈ ಅಸಮಾನತೆಯ ಫಲವೇ ಅತ್ಯಾಚಾರಗಳು. ಅತ್ಯಾಚಾರಗಳನ್ನು ತಡೆಯಲಿಕ್ಕೆ ಸಶಕ್ತ ಕಾನೂನು ಕಟ್ಟಲೆಗಳು ಎಷ್ಟು ಮುಖ್ಯವೋ ಕೌಟುಂಬಿಕ ಮತ್ತು ಸಾಮಾಜಿಕ ನೆಲೆಯಲ್ಲಿ ಮಕ್ಕಳಿಗೆ ‘ದೇಹಭಾಷೆ’ಯ ಕುರಿತು ಮೌಲ್ಯಯುತ ಶಿಕ್ಷಣ ನೀಡುವುದೂ ಮುಖ್ಯ. ಮಕ್ಕಳನ್ನು ಬೆಳೆಸೋದು ಹೇಗೆ, ಅದರಲ್ಲೂ ಗಂಡುಮಕ್ಕಳನ್ನು ಬೆಳೆಸೋದು ಹೇಗೆ ಎನ್ನುವುದರ ಬಗ್ಗೆ ಸಮಾಜ ಗಂಭೀರವಾಗಿ ಯೋಚಿಸಬೇಕಾದ ಸಮಯವಿದು.

■ ಕೋಡಿಬೆಟ್ಟು ರಾಜಲಕ್ಷ್ಮಿ